# ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/ಎನ್‌ಬಿಎ/2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ:11-3-2016

## ಸುತ್ತೋಲೆ

ವಿಷಯ : ಮಾನ್ಯತಾ ಕಾರ್ಯಗಾರ ನಡೆಸುವ (ಎನ್.ಬಿ.ಎ) ಕುರಿತು-.

ಉಲ್ಲೇಖ: ಪ್ರಾಚಾರ್ಯರು, ವಿ.ಇ.ಟಿ. ಬಿ.ವಿ.ಎಲ್. ಪಾಲಿಟೆಕ್ನಿಕ್, ಬೆಂಗಳೂರು, ಇವರ ಮನವಿ ಪತ್ರ ಸಂಖ್ಯೆ: ವಿಇಟಿಪಿ/12000/2015-16 ದ:1-3-2016 ಹಾಗೂ ದೂರವಾಣಿ ಮೂಲಕ ಸಂಭಾಷಣೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖದ ಮನವಿಯಂತೆ ಬೆಂಗಳೂರು ಜಿಲ್ಲೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಕಾರ್ಯಕ್ರಮಗಳ ಮಾನ್ಯತಾ ಸಂಯೋಜಕರುಗಳಿಗೆ ಒಂದು ದಿನದ ಮಾನ್ಯತಾ ಕಾರ್ಯಗಾರವನ್ನು ಈ ಕೆಳಕಂಡ ವೇಳಪಟ್ಟಿಯಂತೆ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಕಾರ್ಯಗಾರದಲ್ಲಿ ಸಂಸ್ಥೆಗಳ ಪ್ರಾಂಶುಪಾಲರು ಹಾಗೂ ಮಾನ್ಯತೆ ಪಡೆಯಲಿಚ್ಚಿಸಿರುವ ಕಾರ್ಯಕ್ರಮಗಳ ಸಂಯೋಜಕರುಗಳು ಭಾಗವಹಿಸಿ, ಇಲ್ಲಿಯವರೆಗೆ ತಮ್ಮ ತಮ್ಮ ಕಾರ್ಯಕ್ರಮಗಳಿಗೆ ಸಂಬಂಧಿಸಿದ ತುಂಬಿದ ಸ್ವಯ ಮೌಲ್ಯಮಾಪನಾ ವರದಿಗಳನ್ನು (SAR) ಈ ಕಾರ್ಯಗಾರಕ್ಕೆ ತಂದು ತಮ್ಮಲ್ಲಿ ಉದ್ಭವಿಸಿದ ಎಲ್ಲಾ ಪ್ರಶ್ನೆ/ಸಂಶಯಗಳನ್ನು ನಿವಾರಿಸಿಕೊಂಡು ತಪ್ಪದೆ ಹಾಜರಾಗಿ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆದುಕೊಳ್ಳಲು ಸೂಚಿಸಿದೆ.

| ಸ್ಥಳ | ದಿನಾಂಕ/ವೇಳೆ | ಭಾಗವಹಿಸಬೇಕಾದ ಸಂಸ್ಥೆಗಳು |
|---|---|---|
| **ವಿ.ಇ.ಟಿ. ಬಿ.ವಿ.ಎಲ್ ಪಾಲಿಟೆಕ್ನಿಕ್,** ನಂ.18, 14ನೇ ಮುಖ್ಯ ರಸ್ತೆ, ಎರಡನೇ ಘಟ್ಟ, ಜೆ.ಪಿ ನಗರ, ಬೆಂಗಳೂರು-78<br>ಪ್ರಾಚಾರ್ಯರು: ಶ್ರೀಮತಿ: ಶ್ರೀಲತಾ ರವರ<br>ಮೊ.ಸಂಖ್ಯೆ: **9945293723** | **18.3.2016**<br>**ಬೆಳಿಗ್ಗೆ 9 ಗಂಟೆ** | 1. ಎ.ಪಿ.ಎಸ್ ಪಾಲಿಟೆಕ್ನಿಕ್, ಸೋಮನಹಳ್ಳಿ, ಬೆಂಗಳೂರು<br>2. ಎಮ್.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು<br>3. ಇಂಪ್ಯಾಕ್ಟ ಪಾಲಿಟೆಕ್ನಿಕ್, ಕೊಡಿಗೆಹಳ್ಳಿ, ಬೆಂಗಳೂರು<br>4. ಅಲ್-ಖತೀಬ್ ಪಾಲಿಟೆಕ್ನಿಕ್, ಬೆಂಗಳೂರು<br>5. ಶ್ರೀ ವೆಂಕಟೇಶ ಪಾಲಿಟೆಕ್ನಿಕ್, ಬೆಂಗಳೂರು<br>6. ಪಿವಿಪಿ ಪಾಲಿಟೆಕ್ನಿಕ್, ಜ್ಞಾನಭಾರತಿ, ಬೆಂಗಳೂರು |

ಈ ಕಾರ್ಯಗಾರವನ್ನು ನಿರ್ದೇಶನಾಲಯದ ಮಾನ್ಯತಾ ಕೋಶದ ಈ ಕೆಳಕಂಡ ಅಧಿಕಾರಿಗಳು ನಡೆಸಿಕೊಡಲು ನಿಯೋಜಿಸಲಾಗಿದೆ:

1. ಶ್ರೀ ಸತೀಶ ರ ಹುದ್ದಾರ, ಉಪ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಶ್ರೀ ಡಿ. ಹೆಚ್. ಜಗದೀಶ, ಅಭಿವೃದ್ಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
3. ಶ್ರೀ ಎಸ್.ಜಿ ವೆಂಕಟೇಶಬಾಬು, ಮಾನ್ಯತಾ ಸಂಯೋಜಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

...2

4. ಶ್ರೀ ಬಿ.ಎಸ್ ವಾಸುಕಿ, ಮಾನ್ಯತಾ ಸಂಯೋಜಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5. ಶ್ರೀ ಭರತ್‌ಲಾಲ್ ಎ.ಆರ್, ಮಾನ್ಯತಾ ಸಂಯೋಜಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

ಮೇಲ್ಕಂಡ ತರಬೇತಿದಾರ-ಅಧಿಕಾರಿಗಳು ಕೆ.ಸಿ.ಎಸ್.ಆರ್ ನಿಯಮಾವಳಿಗಳ ಪ್ರಕಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಅರ್ಹರಾಗಿರುತ್ತಾರೆ.

ನಿರ್ದೇಶಕರು

11/3/2016

ಇವರಿಗೆ:

1. ಸಂಬಂಧಿಸಿದ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ, ಸದರಿಯವರು ಕಾರ್ಯಾಗಾರಕ್ಕೆ ಭಾಗವಹಿಸುವವರ ಪಟ್ಟಿಯನ್ನು ಪ್ರಾಚಾರ್ಯರು, ವಿ.ಇ.ಟಿ. ಬಿ.ವಿ.ಎಲ್. ಪಾಲಿಟೆಕ್ನಿಕ್, ಬೆಂಗಳೂರು, ಇವರಿಗೆ ಎರಡು ದಿನ ಮುಂಚಿತವಾಗಿಯೇ ಸಲ್ಲಿಸುವುದು.
2. ಪ್ರಾಚಾರ್ಯರು, ವಿ.ಇ.ಟಿ. ಬಿ.ವಿ.ಎಲ್ ಪಾಲಿಟೆಕ್ನಿಕ್, ಬೆಂಗಳೂರು, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಇ-ಆಡಳಿತ ಸಂಯೋಜಕರ ಸೂಕ್ತ ಕ್ರಮಕ್ಕಾಗಿ
4. ನಿರ್ದೇಶಕರ ಆಪ್ತ ಸಹಾಯಕ ಮಾಹಿತಿಗಾಗಿ
5. ಕಡತ ಪ್ರತಿ